<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮ್ಎಫ್‌ಸಿ ಹುನಗುಂದ ಇವರ ನ್ಯಾಯಾಲಯದಲ್ಲಿ</u>

<u>ಕ್ರಿಮಿನಲ್ ಮೊಕದ್ದಮೆ ನಂಃ1297/2018</u>

ಸಿ.ಡಬ್ಲ್ಯೂ 3 ಪಿ.ಡಬ್ಲ್ಯೂ-2

ಸಾಕ್ಷಿಯ ಹೆಸರು ಃ ಮಹಾಂತೇಶ ತಿಪ್ಪಣ್ಣವರ

ತಂದೆಯ ಹೆಸರು ಃ ಚೆಂದಪ್ಪ

ವಯಸ್ಸು ಃ 37 ವರ್ಷ

ಉದ್ಯೋಗ ಃ ಶಿಕ್ಷಕ

ವಾಸಸ್ಥಳ ಃ ಚಿಕನಾಳ

ದಿನಾಂಕಃ 22-09-2022 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ</u> ಸಸಅ ರವರಿಂದಃ

ನಾನು ಯಾವುದೇ ಪಂಚನಾಮೆಲ್ಲಿ ಭಾಗಿಯಾಗಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ನಾನು ಒಂದು ಸ್ಥಳಪಂಚನಾಮೆ ನೋಡುತ್ತಿದ್ದು ಅದನ್ನ ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದೆ. ಅದರ ಮೇಲಿರುವ ಸಹಿ ನನ್ನದೇ ಅದನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ನಾನು ಸದರಿ ಸಹಿಯನ್ನು ಪೋಲಿಸರ ಕೋರಿಕೆಯ ಮೇರೆಗೆ ಹಾಕಿದ್ದೇನೆ. ನಾನು ಎರಡು ಛಾಯಾ ಚಿತ್ರಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿ.ಪಿ.2 ಮತ್ತು 3 ಎಂದು ಗುರುತಿಸಲಾಗಿದೆ. ಅವುಗಳನ್ನು ಯಾವ ಕಾರಣಕ್ಕಾಗಿ ಸೆರೆಹಿಡಿಯಲಾಯಿತು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿಯನ್ನು ಕೋರಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ದಾಖಲೆಗಳನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ</u> ಸಸಅ ರವರಿಂದಃ

ದಿ**. 26-07-2017** ರಂದು ಮುಂಜಾನೆ **9** ರಿಂದ **10** ರವರೆಗೆ ಸಿದ್ದನಕೊಳ್ಳದ ರಸ್ತೆ ಕಡೆಗೆ ಇರುವ ಪರಶುರಾಮ ಪೂಜಾರಿ ಇವರ ಜಮೀನಿನಲ್ಲಿ ಪೋಲಿಸರು ನನ್ನ ಹಾಗೂ ಚಾಸಾ**-2** ರವರ ಸಮಕ್ಷಮ ಗುನ್ನಾ ಜಾಗೆ ಪಂಚನಾಮೆ ಮಾಡಿ ನಿ**.**ಪಿ**.1** ರಂತೆ ಪಂಚನಾಮೆ ಬರೆದು ನಿ**.**ಪಿ**.2** ಮತತು **3** ರಂತೆ ಛಾಯಾಚಿತ್ರಗಳನ್ನು ಸೆರೆಹಿಡಿದಿರುತ್ತಾರೆ ಅಂದರೆ ಸರಿ ಅಲ್ಲ**.**

ಆರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದ ಎದುರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿ ಅಲ್ಲ**.**

ಮರು ವಿಚಾರಣೆ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ.